# KARNATAKA STATE ROAD TRANSPORT CORPORATION

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

Kempegowda Bus Station Division ::ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ

ದಿನಾಂಕ: 31.07.2018

ಸಂ/ಕರಾಸಾ/ಕೆಂಬನಿ/ವಿನಿ/ವಾ-1/ 536/2018-19

### ಟೆಂಡರ್ ಪ್ರಕಟಣೆ ಸಂಖ್ಯೆ : 02/2018-19

### (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಯಲ್ಲಿರುವ ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣ, ಬೆಂಗಳೂರು ಇಲ್ಲಿ ಪ್ಯಾಕೇಜ್ ಮಾದರಿಯಲ್ಲಿ ಜಾಹೀರಾತು ಫಲಕ/ವಿಡೀಯೋವಾಲ್‌ಗಳನ್ನು ಅಳವಡಿಸಲು **ಐದು(5) ವರ್ಷಗಳ ಅವಧಿಗೆ** ಪರವಾನಗಿದಾರರನ್ನು ಆಯ್ಕೆ ಮಾಡಲು ಖಾಲಿ ಇರುವ ಪ್ಯಾಕೇಜ್‌ಗಳಿಗೆ **3ನೇ ಬಾರಿ ಇ-ಪ್ರೊಕ್ಯೂರ್‌ಮೆಂಟ್** ಮೂಲಕ ಟೆಂಡರ್ ಏರ್ಪಡಿಸಲಾಗಿದೆ. ಆಯ್ಕೆಯಾದ ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಸರ್ಕಾರದ ಸ್ಟಾಂಪ್ ಕಾಯಿದೆ ಅನ್ವಯ ನಿಗಮದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು ಹಾಗೂ ಪರವಾನಗಿ ಶುಲ್ಕದ ಮೇಲೆ ಸರ್ಕಾರ ನಿಗದಿಪಡಿಸಿರುವ ಜಿ.ಎಸ್.ಟಿ ತೆರಿಗೆಯನ್ನು ಪಾವತಿಸತಕ್ಕದ್ದು ಹಾಗೂ ಮಾಸಿಕ ಪರವಾನಗಿ ಶುಲ್ಕವು ವಾರ್ಷಿಕ ಶೇ.10 ರಷ್ಟು ಹೆಚ್ಚಳವಾಗುವ ನಿಬಂಧನೆಗೊಳಪಟ್ಟಿದೆ.

"ಅರ್ಜಿದಾರರು ಸಂಬಂಧಿಸಿದ ಜಾಹೀರಾತು ಫಲಕಗಳ ಆಯಾ ಪ್ಯಾಕೇಜ್‌ಗಳಿಗೆ ಅರ್ಜಿ ಶುಲ್ಕ/ಇ.ಎಂ.ಡಿ ಮೊತ್ತವನ್ನು Divisional Controller, KSRTC, Kempegowda Bus Station, Bengaluru-560009 ರವರ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್(ಡಿಡಿ) ಪಡೆದು, ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಹಾಗೂ ಟೆಂಡರ್ ತೆರೆಯುವ ಕೊನೆಯ ದಿನಾಂಕದೊಳಗೆ ಕೆಂಪೇಗೌಡ ಬಸ್ ನಿಲ್ದಾಣದ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ತಮ್ಮ ಆನ್‌ಲೈನ್ ಅರ್ಜಿಯನ್ನು ತಿರಸ್ಕರಿಸಲಾಗುವುದು. ಬಿಡ್‌ದಾರರು ನಿಗದಿತ ಇ.ಎಂ.ಡಿ ಮೊತ್ತದಲ್ಲಿ ರೂ.500/-ಗಳನ್ನು ಇ-ಪೋರ್ಟಲ್ ಮುಖಾಂತರ ಪಾವತಿಸುವುದು. ಇನ್ನುಳಿದ ಇ.ಎಂ.ಡಿ ಮೊತ್ತವನ್ನು ಡಿ.ಡಿ ರೂಪದಲ್ಲಿ ಪಡೆದು ಟೆಂಡರ್ ತೆರೆಯುವ ಕೊನೆಯ ದಿನಾಂಕದೊಳಗೆ ಖುದ್ದಾಗಿ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸುವುದು. ಸದರಿ ಡಿ.ಡಿ ಯ ಜೆರಾಕ್ಸ್ ಪ್ರತಿಯನ್ನು ಇ-ಪೋರ್ಟಲ್‌ನಲ್ಲಿ ಇತರೆ ದಾಖಲಾತಿಗಳೊಂದಿಗೆ ಅಪ್ ಲೋಡ್ ಮಾಡುವುದು.

# ಜಾಹೀರಾತು ಫಲಕಗಳ ವಿವರಗಳು(3ನೇ ಬಾರಿ ಟೆಂಡರ್)

# ಕೆಂಪೇಗೌಡ ಬಸ್ ನಿಲ್ದಾಣದ ಹೊರ ಆವರಣ

| ಪ್ಯಾಕೇಜ್ ಸಂಖ್ಯೆ | ಕ್ರ.ಸಂಖ್ಯೆ | ಜಾಹೀರಾತು ಫಲಕಗಳ ವಿವರಗಳು | ವಿಸ್ತೀರ್ಣ ಚದರಡಿಗಳಲ್ಲಿ | ದರ ಪ್ರತಿ ಚದರಡಿಗೆ ರೂ.ಗಳಲ್ಲಿ | ಮಾಸಿಕ ಮಿತವ್ಯಯ ಪರವಾನಗಿ ಶುಲ್ಕ ರೂ.ಗಳಲ್ಲಿ | ಇ.ಎ[redacted](ರೂಗಳಲ್ಲಿ) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ರೂ.ಗಳಲ್ಲಿ | ಡಿ.ಡಿ ಮೂಲಕ ರೂ.ಗಳಲ್ಲಿ | ಅರ್ಜಿ ಶುಲ್ಕ + 18% ಜಿ.ಎಸ್.ಟಿ ಡಿ.ಡಿ ಮೂಲಕ ರೂ.ಗಳಲ್ಲಿ |
|---|---|---|---|---|---|---|---|---|
| 2 | 1 | ಟರ್ಮಿನಲ್-1 ರಲ್ಲಿರುವ ಅಂಕಣ 03 ರ ಛಾವಣಿಯ ಮೇಲೆ ವಿಡೀಯೋ ವಾಲ್ | 200 | 180 | 36,000 | 500 | 3,23,500 | 1080+194=1274 |
| | 2 | ಟರ್ಮಿನಲ್-2 ನಲ್ಲಿರುವ ಮಳಿಗೆ ಸಂಖ್ಯೆ 22 ರ ಪ್ರವಾಸಿ ಲಾಡ್ಜಿನ ಛಾವಣಿಯ ಮೇಲೆ ವಿಡೀಯೋ ವಾಲ್ | 200 | | 36,000 | | | |
| | 3 | ಟರ್ಮಿನಲ್-2 ರ ನಿರ್ಗಮನದ ದ್ವಾರದ ಬಳಿ ಶೌಚಾಲಯದ ಪಕ್ಕ ವಿಡೀಯೋವಾಲ್ | 200 | | 36,000 | | | |
| | **ಒಟ್ಟು** | | **600** | | **1,08,000** | | | |
| 3 | 1 | ಟರ್ಮಿನಲ್-01 ರಲ್ಲಿ ವಾಹನಗಳು ಹೊರಗೆ ಹೋಗುವ ದ್ವಾರದ ಮೇಲಿರುವ ಫೂಟ್ ಬ್ರಿಡ್ಜ್, ಪ್ಯಾರಾಪೆಟ್/ರೈಲಿಂಗ್ ಮೇಲೆ (ಎರಡೂ ಕಡೆ) ಫಲಕಗಳು | 1000 | 31.5 | 31,500 | 500 | 3,96,400 | 1323+238=1561 |
| | 2 | ಟರ್ಮಿನಲ್-01 ರಲ್ಲಿರುವ ಅಂಕಣ 03 & 04 ರ ನಡುವೆ ಇರುವ ಪಾದಾಚಾರಿ ಮಾರ್ಗದ ಮೇಲೆ (40'X20')ರ 2 ಫಲಕಗಳು | 1600 | | 50,400 | | | |
| | 3 | ಟರ್ಮಿನಲ್-02 ರಲ್ಲಿರುವ ಮುಖ್ಯ ಕಟ್ಟಡದ ಮೇಲೆ(40'X20')ರ 2 ಫಲಕಗಳು | 1600 | | 50,400 | | | |
| | **ಒಟ್ಟು** | | **4200** | | **1,32,300** | | | |

# ಮೈಸೂರು ರಸ್ತೆ ಬಸ್ ನಿಲ್ದಾಣದ ಒಳ ಆವರಣ

| ಪ್ಯಾಕೇಜಿನ ಸಂಖ್ಯೆ | ಕ್ರ.ಸಂ | ಜಾಹೀರಾತು ಫಲಕಗಳ ವಿವರಗಳು | ವಿಸ್ತೀರ್ಣ ಚದರಡಿಗಳಲ್ಲಿ | ದರ ಪ್ರತಿ ಚದರಡಿಗೆ ರೂ.ಗಳಲ್ಲಿ | ಮಾಸಿಕ ಮಿತವ್ಯಯ ಪರವಾನಗಿ ಶುಲ್ಕ ರೂ.ಗಳಲ್ಲಿ | ಇ.ಎಂ.ಡಿ (ರೂಗಳಲ್ಲಿ) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ರೂ.ಗಳಲ್ಲಿ | ಇ.ಎಂ.ಡಿ (ರೂಗಳಲ್ಲಿ) ಡಿ.ಡಿ ಮೂಲಕ ರೂ.ಗಳಲ್ಲಿ | ಅರ್ಜಿ ಶುಲ್ಕ + 18% ಜಿ.ಎಸ್.ಟಿ ಡಿ.ಡಿ ಮೂಲಕ ರೂ.ಗಳಲ್ಲಿ |
|---|---|---|---|---|---|---|---|---|
| 1 | 1. | ಬಸ್ ನಿಲ್ದಾಣದ ಸ್ತಂಭಗಳ ಮೇಲೆ, (2 sides X16 No X5'X 8') | 1280 | 27 | 34560 | 500/- | 3,02,440 | 1010+182=1192 |
| | 2. | ನಿಲ್ದಾಣದ ಒಳಗಿನ ವಾಣಿಜ್ಯ ಮಳಿಗೆಗಳ ಮುಂಭಾಗ ಹಾಗೂ ಮೇಲ್ಭಾಗದಲ್ಲಿ | 2200 | | 59400 | | | |
| | 3. | ಮಡಿಕೇರಿ ಅಂಕಣದ (ಎಲಿವೇಟೆಡ್ ಟಾಪ್) ಬಸ್ ತಾಣದ ಮೇಲ್ಭಾಗದಲ್ಲಿ (82'X3¼') | 260 | | 7020 | | | |
| | | **ಒಟ್ಟು** | **3740** | | **1,00,980** | | | |
| 2 | 1. | ಬೆಂ.ಮ.ಸಾ.ಸಂಸ್ಥೆಯ ನಿಲ್ದಾಣದ ಪಾಸ್ ಕೌಂಟರ್‌ನ ಮೇಲ್ಭಾಗದಲ್ಲಿ | 300 | 27 | 8100 | 500/- | 82,120 | 275+50=325 |
| | 2. | ಬೆಂ.ಮ.ಸಾ.ಸಂಸ್ಥೆಯ ಅಂಕಣಗಳಲ್ಲಿ (3ಬೇ X 2sides X10' X4'X2no.) Hanging boards | 480 | | 12960 | | | |
| | 3 | ಬೆಂ.ಮ.ಸಾ.ಸಂಸ್ಥೆಯ ನಿಲ್ದಾಣದ ಸ್ತಂಭಗಳ ಮೇಲೆ(10 NoX4'X6'.) | 240 | | 6480 | | | |
| | | **ಒಟ್ಟು** | **1020** | | **27540** | | | |
| 3 | 1. | ಕ.ರಾ.ರ.ಸಾ.ನಿಗಮದ ಮುಂಗಡ ಕಾಯ್ದಿರಿಸುವ ಶಾಖೆಯ ಮೇಲ್ಭಾಗದಲ್ಲಿ ವಿಡಿಯೋ ವಾಲ್-1 | 200 | 180 | 36000 | 500/- | 1,07,500 | 360+65=425 |
| | | **ಒಟ್ಟು** | **200** | | **36000** | | | |

# ಮೈಸೂರು ರಸ್ತೆ ಬಸ್ ನಿಲ್ದಾಣದ ಹೊರ ಆವರಣ

| ಪ್ಯಾಕೇಜ್ ಸಂಖ್ಯೆ | ಕ್ರ.ಸಂ | ಜಾಹೀರಾತು ಫಲಕಗಳ ವಿವರಗಳು | ವಿಸ್ತೀರ್ಣ ಚದರಡಿಗಳಲ್ಲಿ | ದರ ಪ್ರತಿ ಚದರ ಡಿಗೆ | ಮಾಸಿಕ ಮಿತವ್ಯಯ ಪರವಾನಗಿ ಶುಲ್ಕ ರೂ.ಗಳಲ್ಲಿ | ಇ.ಎಂ.ಡಿ (ರೂಗಳಲ್ಲಿ) | | ಅರ್ಜಿ ಶುಲ್ಕ + 18% ಜಿ.ಎಸ್.ಟಿ ಡಿ.ಡಿ ಮೂಲಕ ರೂ.ಗಳಲ್ಲಿ |
|---|---|---|---|---|---|---|---|---|
| | | | | | | ಇ–ಪ್ರೊಕ್ಯೂರ್‌ಮೆಂಟ್ ಮೂಲಕ ರೂ.ಗಳಲ್ಲಿ | ಡಿ.ಡಿ ಮೂಲಕ ರೂ.ಗಳಲ್ಲಿ | |
| 4 | 1. | ಮಡಿಕೇರಿ ಅಂಕಣದ ಮುಂಭಾಗದಲ್ಲಿ(ಪಾರ್ಕ್ ಬಳಿ) | 3200 | 27 | 86400 | 500/- | 4,72,540 | 1577+284 =1861 |
| | 2. | ಸಿಬ್ಬಂದಿಗಳ ವಿಶ್ರಾಂತಿ ಗೃಹದ ಮೇಲೆ (40'X 20') | 800 | | 21600 | | | |
| | 3. | ಕೆ.ಎಸ್.ಆರ್.ಟಿ.ಸಿ.ಬಸ್ ನಿಲ್ದಾಣದ ಪ್ರವೇಶ ದ್ವಾರದ ಎಡಭಾಗದಲ್ಲಿ ಫಲಕಗಳು | 1600 | | 43200 | | | |
| | 4. | ಕೆ.ಎಸ್.ಆರ್.ಟಿ.ಸಿ.ಬಸ್ ನಿಲ್ದಾಣದ ನಿರ್ಗಮನ ದ್ವಾರದ ಬಲಭಾಗದಲ್ಲಿನ ಗ್ರಿಲ್‌ಗಳ ಮೇಲೆ ಫಲಕಗಳು | 240 | | 6480 | | | |
| | | **ಒಟ್ಟು** | **5840** | | **157680** | | | |
| 5 | 1. | ಬೆಂ.ಮ.ಸಾ.ಸಂಸ್ಥೆಯ ನಿಲ್ದಾಣದ ಪ್ರವೇಶ ದ್ವಾರದ ಎಡಭಾಗದಲ್ಲಿ ಫಲಕಗಳು (30' X30') | 900 | 31.5 | 28350 | 500/- | 2,54,650 | 851+153= 1004 |
| | 2. | ಕೆ.ಎಸ್.ಆರ್.ಟಿ.ಸಿ.ಬಸ್ ನಿಲ್ದಾಣದ ನಿರ್ಗಮನ ದ್ವಾರದ ಬಲಭಾಗದಲ್ಲಿ ಫಲಕಗಳು (30'X30' X2s) | 1800 | | 56700 | | | |
| | | **ಒಟ್ಟು** | **2700** | | **85050** | | | |
| 6 | 1. | ಕೆ.ಎಸ್.ಆರ್.ಟಿ.ಸಿ.ಬಸ್ ನಿಲ್ದಾಣದ ಮೇಲ್ಛಾವಣಿಯ ಮೇಲಿನ ಫಲಕಗಳು | 2000 | 31.5 | 63,000 | 500/- | 1,88,500 | 630+113= 743 |
| | | **ಒಟ್ಟು** | **2000** | | **63000** | | | |

ಆಸಕ್ತಿಯುಳ್ಳ ಬಿಡ್‌ದಾರರು ಅವಶ್ಯ ದಾಖಲಾತಿಗಳೊಂದಿಗೆ ಇ-ಪೋರ್ಟಲ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. ಅಧಿಸೂಚನೆಯೊಂದಿಗೆ ಅಪ್‌ಲೋಡ್ ಮಾಡಲಾಗಿರುವ ಷರತ್ತು ಮತ್ತು ನಿಭಂದನೆಗಳು ಟೆಂಡರ್ ಪ್ರಕ್ರಿಯೆಯ ಭಾಗವಾಗಿದೆ. ಹೆಚ್ಚಿನ ವಿವರಗಳಾಗಿ **http://www.eproc.karnataka.gov.in** ವೆಬ್ ಸೈಟ್ ಅನ್ನು ಹಾಗೂ ವಿಭಾಗೀಯ ಕಛೇರಿ ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಯಾವುದೇ ಸಮಯದಲ್ಲಿ ಯಾವುದೇ ಕಾರಣ ನೀಡದೇ ಟೆಂಡರ್ ಅನ್ನು ತಿರಸ್ಕರಿಸುವ, ಪುರಸ್ಕರಿಸುವ ಅಥವಾ ಮಾರ್ಪಾಡಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗೆ 7760990554/7760960049 ಗೆ ಸಂಪರ್ಕಿಸುವುದು.

ಅಂತರ್ಜಾಲದ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬಹುದಾದ ದಿನಾಂಕ: **01/08/2018 ರಿಂದ 30/08/2018 ರ 16.00** ಗಂಟೆಯವರೆಗೆ

ಇ.ಎಂ.ಡಿ ಡಿಡಿಯನ್ನು ದಿನಾಂಕ **01/09/2018 ರಂದು ಸಮಯ 13:30** ರೊಳಗಾಗಿ ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವಾಣಿಜ್ಯ ಶಾಖೆಯಲ್ಲಿ ಸಲ್ಲಿಸುವುದು.

ಇ-ಪೋರ್ಟಲ್ ಮೂಲಕ ಟೆಂಡರ್‌ನ್ನು ದಿನಾಂಕ : **03/09/2018 ರಂದು 11.00 ಗಂಟೆಗೆ** ತೆರೆಯಲಾಗುವುದು.

ದಿನಾಂಕ: **03/09/2018** ರಂದು ಇ-ಟೆಂಡರ್ ಅನ್ನು ತೆರೆಯಲು ಸಾಧ್ಯವಾಗದೇ ಇದ್ದಲ್ಲಿ ಮುಂಚಿತವಾಗಿ ಮಾಹಿತಿ ನೀಡಿ ತೆರೆಯಲಾಗುವುದು.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ
ಕೆಂಪೇಗೌಡ ಬಸ್ ನಿಲ್ದಾಣ: ಬೆಂಗಳೂರು

ಪ್ರತಿಯನ್ನು: ಗೌರವಪೂರ್ವಕವಾಗಿ:

1. ಆಪ್ತ ಕಾರ್ಯದರ್ಶಿಗಳು, ನಿರ್ದೇಶಕರು(ಭ& ಜಾ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯ ನಿರ್ದೇಶಕರ ಗಮನಕ್ಕೆ ತರಲು ಕೋರಲಾಗಿದೆ.
2. ಮುಖ್ಯ ಸಂಚಾರ ವ್ಯವಸ್ಥಾಪಕರು(ವಾಣಿಜ್ಯ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಮುಖ್ಯ ಗಣಕ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ಈ ಮೂಲಕ ಕಳುಹಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ಕೆಂಪೇಗೌಡ ಬಸ್ ನಿಲ್ದಾಣ: ಬೆಂಗಳೂರು

ಪ್ರತಿಯನ್ನು: ವಿಭಾಗೀಯ ಟೆಂಡರ್ ಕಮಿಟಿಯ ಸದಸ್ಯರು, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ದಿನಾಂಕ 03/09/2018 ರಂದು ನಡೆಯುವ ಟೆಂಡರ್‌ನಲ್ಲಿ ಭಾಗವಹಿಸಲು ಈ ಮೂಲಕ ತಿಳಿಸಲಾಗಿದೆ.